2

# ದೇವರ ಅಸ್ತಿತ್ವ

ಯೋಚಿಸುವಂಥ ಬಹಳಷ್ಟು ಜನರು ದೇವರ ಅಸ್ತಿತ್ವವನ್ನು ಪುನಃ ಪುನಃ ಯೋಚಿಸಿದ್ದಾರೆ. ಅವರು ಸಂಶಯಪಡದಿದ್ದರೂ, ಪರಮಶ್ರೇಷ್ಠ ಜೀವಿಯ ಅಸ್ತಿತ್ವಕ್ಕಾಗಿರುವ ರುಜುವಾತುಗಳ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ನಾವು ನಮ್ಮ ನಿರೀಕ್ಷೆಗಾಗಿ ಉತ್ತರ ಹೇಳುವದಕ್ಕೆ ಸಿದ್ಧರಾಗಿರಬೇಕು (1 ಪೇತ್ರ 3:15).

ದೇವರು ಅಸ್ತಿತ್ವದಲ್ಲಿರುವದಿಲ್ಲವೆಂಬ ತೀರ್ಮಾನಕ್ಕೆ ಬಂದಿರುವದಾಗಿ ನಾಸ್ತಿಕರು ಹೇಳುವರು. ದೇವರು ಇಲ್ಲ ಎಂದು ತಿಳಿಯುವದು ಒಬ್ಬ ವ್ಯಕ್ತಿಗೆ ಅಸಾಧ್ಯವಾದದ್ದಾಗಿರುವುದು. ಆ ರೀತಿಯಲ್ಲಿ ಹೇಳಬೇಕಾದರೆ ಅವನು ಸರ್ವಜ್ಞನಾಗಿರಬೇಕು. ಪರಮಶ್ರೇಷ್ಠ ಜೀವಿ ಇರುವದನ್ನು ನಂಬುವದಕ್ಕಾಗಿ ಈ ಪಾಠವು ಕೆಲವು ಕಾರಣಗಳನ್ನು ಮುಂದಿಡುವುದು.

## ದೇವರ ಅಸ್ತಿತ್ವವನ್ನು ಬೈಬಲು ಬೋಧಿಸುವುದು

ಬೈಬಲಿನ ಮೊದಲನೆಯ ಪುಸ್ತಕ, ಆದಿಕಾಂಡವು "ಆದಿಯಲ್ಲಿ ದೇವರು" ಎಂಬ ಗಂಭೀರವಾದ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ ಹಾಗೂ ಪುಸ್ತಕದಲ್ಲೆಲ್ಲ ಆತನ ಅಸ್ತಿತ್ವವನ್ನು ಘೋಷಿಸುತ್ತದೆ. ಈ ವಾದವು ಬೈಬಲನ್ನು ನಂಬಲರ್ಹ ಸಾಕ್ಷಿಯಂತೆ ಸ್ವೀಕರಿಸದ ವ್ಯಕ್ತಿಯ ಮೇಲೆ ಪರಿಣಾಮ ಮಾಡುವದಿಲ್ಲ. ಹಿಂದಿನ ಪಾಠದಲ್ಲಿಯಂತೆ ನಾವೀಗಾಗಲೇ ಬೈಬಲು ಯೋಗ್ಯವಾದ ಸಾಕ್ಷಿಯಾಗಿರುವ ಸಂಗತಿಯನ್ನು ಸ್ಥಾಪಿಸಿರುವಾಗ, ಅದರ ಸಾಕ್ಷಿಗೆ ಕೆಲವೊಂದು ಬಲವಿದೆ. ನಮ್ಮ ಹಿಂದಿನ ಪಾಠದಲ್ಲಿ ಬೈಬಲನ್ನು ನಂಬುವದಕ್ಕಾಗಿ ಕಾರಣಗಳನ್ನು ಹೇಳಿದ್ದೇವೆ. ಬೈಬಲು ದೈವಿಕ ಪುಸ್ತಕವಾಗಿದೆ ಹಾಗೂ ಅದು ಪ್ರಮಾಣೀಕರಿಸಲ್ಪಡಲು ಸಾಧ್ಯವಾಗಿರುವ ಪ್ರತಿಯೊಂದರಲ್ಲಿ ಪ್ರಮಾಣೀಕರಿಸಲ್ಪಟ್ಟದ್ದರಿಂದ, ಪಂಚೇಂದ್ರಿಯ ಜ್ಞಾನಗಳಿಂದ ಪ್ರಮಾಣೀಕರಿಸಲ್ಪಡಲಾರದ ವಿಷಯಗಳಲ್ಲಿ ಅದರ ಸಾಕ್ಷಿಯನ್ನು ಸ್ವೀಕರಿಸಲು ನಾವು ಸಿದ್ಧರಿರಬೇಕು. ಒಂದು ಸಾಕ್ಷಿಯಾಗಿ ಬೈಬಲು ತನ್ನ ಸಾಮರ್ಥ್ಯವನ್ನು ಸಿದ್ಧಪಡಿಸಿತೋರಿಸಿದ್ದರಿಂದ, ದೇವರ ಅಸ್ತಿತ್ವವನ್ನು ಘೋಷಿಸುವದರಲ್ಲಿ ಅದು ಸತ್ಯವನ್ನು ಹೇಳುತ್ತಿರುವದೆಂದು ನಾನು ನಂಬುತ್ತೇನೆ. ದೇವರು ಇರುವನೆಂದು ನಾನು ನಂಬುತ್ತೇನೆ.

ದೃಢಪಡಿಸುವ ವಿಪುಲವಾದ ಸಾಕ್ಷಿಯು ಲಭ್ಯವಿರುವುದು. ಈ ಪಾಠದ ಉಳಿದ ಭಾಗವು ಬೈಬಲಿಗೆ ಹೊರಗಿರುವ ದೇವರ ಅಸ್ತಿತ್ವಕ್ಕಾಗಿರವ ಪುರಾವೆಗಳ ಬಗ್ಗೆ ತಿಳಿಸುವುದು.

# ಪರಮ ಶ್ರೇಷ್ಠ ಜೀವಿಯ ಅಸ್ತಿತ್ವಕ್ಕೆ ಸೃಷ್ಟಿಯು ಸಾಕ್ಷಿ ಕೊಡುತ್ತದೆ

ದೇವರ "ಕಣ್ಣಿಗೆ ಕಾಣದಿರುವ ಗುಣಲಕ್ಷಣಗಳು ... ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ ..." (ರೋಮಾಪುರ 1:20). "ಆಕಾಶಗಳು ದೇವರ ಮಹಿಮೆಯನ್ನು ಪ್ರಚುರಪಡಿಸುತ್ತವೆ, ಅಂತರಿಕ್ಷವು ಆತನ ಕೈಕೆಲಸಗಳನ್ನು ತಿಳಿಸುತ್ತದೆ" (ಕೀರ್ತನೆ 19:1); ಹಾಗೂ "ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನೂ ನೀನು ಉಂಟು ಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ ನೀನು ಮನುಷ್ಯನನ್ನು ನೆನಸಲು ಅವನು ಎಷ್ಟರವನು ... ?" (ಕೀರ್ತನೆ 8:3, 4) ಎಂದು ಕೀರ್ತನೆಗಾರನು ಹೇಳಿದ್ದಾನೆ. ಬಹಳ ಕಾಲದ ಹಿಂದೆಯೇ ದಾವೀದನು ಅದ್ಭುತಕರವಾದ ವಿಶ್ವವನ್ನು ಅವಲೋಕಿಸಿದಂತೆ ನಾವೂ ಅವಲೋಕಿಸಬಹುದು. ದಾವೀದನ ಸಮಯದಲ್ಲಿಯ ಜನರಿಂದ ತಿಳಿಯಲ್ಪಡುವದಕ್ಕಿಂತಲೂ ಎಷ್ಟೋ ಹೆಚ್ಚಾಗಿ ವಿಶ್ವದ ಬಗ್ಗೆ ತಿಳಿದುಕೊಳ್ಳಲು ಈಗ ಮನಷ್ಯನಿಗೆ ಸೌಲಭ್ಯಗಳು ಇರುತ್ತವೆ. ಪ್ರತಿಯೊಂದು ಹೊಸ ಸಂಶೋಧನೆಯು ದೇವರ ಅಸ್ತಿತ್ವದ ಭಾವನೆಯನ್ನು ಗಟ್ಟಿಮಾಡುತ್ತದೆ.

ವಿಶ್ವದ ಅಪರಿಮಿತತ್ವ ನಮ್ಮ ಮೇಲೆ ಪ್ರಭಾವ ಬೀರುವ ಒಂದು ಸಂಗತಿಯಾಗಿದೆ. ನಾವು ವಾಸಿಸುತ್ತಿರುವ ಭೂಮಿಯು ಪ್ರಚಂಡವಾಗಿ ದೊಡ್ಡದಾಗಿರುತ್ತದೆ. ಆದರೂ ಅದು ಸೂರ್ಯನಿಗೆ ಹೋಲಿಸಲ್ಪಡುವಾಗ ಅದು ಒಂದು ಚುಕ್ಕಿಯಂತಿರುತ್ತದೆ. ಸೂರ್ಯನು ಒಂದು ಮಿಲಿಯ ತುಂಡುಗಳಾಗಿ ಕತ್ತರಿಸಲ್ಪಟ್ಟರೆ, ಅದು ಭೂಮಿಯ ಆಳತೆಗಿಂತಲೂ ದೊಡ್ಡದಾಗಿರುವುದು. ಈ ಭೂಮಿಯು ಸೂರ್ಯನ ಬೆಳಕಿನ ಹಾಗೂ ಉಷ್ಣತೆಯ ಎರಡು ಬಿಲಿಯನ್ ಭಾಗದಲ್ಲಿ ಒಂದು ಭಾಗವನ್ನು ಮಾತ್ರ ಹೊಂದುತ್ತದೆ.

ಭೂಮಿಯ ಸುತ್ತಲಿನ ಅಂತರವು ಸುಮಾರು ಇಪ್ಪತ್ತೈದು ಸಾವಿರ ಮೈಲುಗಳಷ್ಟಿರುವುದು. ಸೂರ್ಯನಿಗೆ ಅಂತರವು ಭೂಮಿಯ ಸುತ್ತಲಿನ ಅಂತರಕ್ಕಿಂತ ನಾಲ್ಕು ಸಾವಿರದಷ್ಟು ದೊಡ್ಡದಾಗಿರುವುದು, ಅಂದರೆ ಸುಮಾರು ತೊಂಭತ್ತೆರಡು ಮಿಲಿಯನ್ ಮೈಲುಗಳಿಗಿಂತ ಹೆಚ್ಚಾಗಿರುವುದು. ನೆಪ್ಚುನ ಗ್ರಹವು ಎರಡುವರೆ ಬಿಲಿಯನ್ ಮೈಲು ಅಥವಾ ಭೂಮಿಯಿಂದ ಸೂರ್ಯನು ದೂರದಲ್ಲಿರುವದರ ಮೂವತ್ತರಷ್ಟು ದೂರದಲ್ಲಿದೆ. ಆಕಾಶದಲ್ಲಿಯ ಅತೀ ಹೆಚ್ಚು ಹೊಳಪುಳ್ಳ ನಕ್ಷತ್ರವಾದ ಸಿರಿಯಸ್ ಐವತ್ತೊಂದು ಟ್ರಿಲಿಯನ್ ಮೈಲು ದೂರದಲ್ಲಿದೆ. ಆಕಾಶದಲ್ಲಿ ಮೂರನೆಯ ಅತೀ ಹೆಚ್ಚು ಬೆಳಕುಳ್ಳ ನಕ್ಷತ್ರ, ಅಲ್ಪ ಸೆಂಟೌರಿಯು ಇಪ್ಪತ್ತು ಟ್ರಿಲಿಯನ್ ಮೈಲು ದೂರದಲ್ಲಿದೆ, ಇಲ್ಲವೇ ಸೂರ್ಯನು ದೂರವಿರುವದಕ್ಕಿಂತಲೂ ಇನ್ನೂರು ಮೂವತ್ತು ಸಾವಿರ ಪಟ್ಟು ಹೆಚ್ಚು ದೂರದಲ್ಲಿದೆ ಎಂದು ಹೇಳಲಾಗಿದೆ. ಆಕಾಶಕಾಯಗಳು ಬಹಳ ದೊಡ್ಡವುಗಳಾಗಿದ್ದು, ಅವು "ಬೆಳಕಿನ ವರ್ಷಗಳಲ್ಲಿ" ಅಳೆಯಲ್ಪಟ್ಟಿವೆ. ಅವುಗಳಲ್ಲಿ ಕೆಲವು ಪೃಥ್ವಿಯಿಂದ ಸಾವಿರಾರು ಬೆಳಕಿನ ವರ್ಷಗಳಿಂದ ದೂರದಲ್ಲಿವೆ. ಇದರ ಅರ್ಥ ಪ್ರತಿ ಸೆಕೆಂಡಿಗೆ 186,000 ಮೈಲು ಗಳಂತೆ ಹರಿಯುವ ಬೆಳಕಿಗೆ ಆಕಾಶಕಾಯಗಳಿಂದ ನಮ್ಮನ್ನು ತಲುಪಲು ಸಾವಿರಾರು ವರ್ಷಗಳು ಬೇಕಾಗುತ್ತವೆಂದು ಹೇಳಲ್ಪಟ್ಟಿದೆ. ಖಗೋಲ ಶಾಸ್ತ್ರಜ್ಞರ ಪ್ರಕಾರ ಸೂರ್ಯ, ಗ್ರಹಗಳು ಹಾಗೂ ನೈಸರ್ಗಿಕ ಉಪಗ್ರಹಗಳು ಕೂಡಿರುವ ನಮ್ಮ ಸೌರ ಪದ್ಧತಿ ಒಂದೇ ಯಾಗಿರುವುದಿಲ್ಲ. ಪ್ರತಿಯೊಂದು ತನ್ನ ಸ್ವಂತ ಸೂರ್ಯ ಮತ್ತು ಗ್ರಹಗಳಿರುವ ಇತರವು ಮಿಲಿಯನ್ ಗಟ್ಟಲೇ ಸಂಖ್ಯೆಯಲ್ಲಿ ಇರುವವೆಂದು ಅವರು ಹೇಳುತ್ತಾರೆ.

ಈ ಸಂಖ್ಯೆಗಳು ನಮಗೆ ಅರ್ಥ ಕೊಡುವದಿಲ್ಲ. ನಾವು ಅರ್ಥ ಮಾಡಿಕೊಳ್ಳಲು ಪ್ರಾರಂಭಿಸಲಾಗದಷ್ಟು ಬಹಳ ದೊಡ್ಡವುಗಳಾಗಿವೆ. ಆದರೆ ಅದು ವಿಶ್ವದ ಅಪರಿಮಿತತೆಯ ಬಗ್ಗೆ ಕೆಲವೊಂದನ್ನು ಸೂಚಿಸುತ್ತವೆ. ಮನುಷ್ಯನು ಸಂಶೋಧಿಸಿದ್ದ ಎಲ್ಲದರ ಮೇಲೆ ಕೇಂದ್ರೀಕರಿಸುವಾಗ, ನಾವು ಪ್ರಭಾವಿತರಾಗುತ್ತೇವೆ; ಆದರೆ ದೇವರ ಕಾರ್ಯಗಳ

ಅಂಚುಗಳನ್ನು ಮಾತ್ರವೇ ನಾವು ಸಂಶೋಧಿಸಿದ್ದೇವೆ. ಯಾರೋ ಒಬ್ಬರು ವಿಶ್ವದ ಘನತೆಯನ್ನು ಒತ್ತಿ ಹೇಳುತ್ತ ಹೀಗೆ ಹೇಳಿದ್ದಾರೆ: "ನಾನು ಹೆಜ್ಜೆಯಿಡುವ ಭೂಮಂಡಲವು ಉಗಿಯಾಗಿ ಕರಗಿ ಹೋಗುವಾಗ ವಿಶ್ವದ ಮಹಿಮೆಗಾಗುವ ನಾಶವು, ಒಂದು ಎಲೆಯ ಬಿಳುವಿಕೆಯಿಂದ ಈ ವಿಶಾಲವಾದ ಕಾಡಿನ ಮಹಿಮೆಗೆ ಉಂಟಾಗುವ ಹಾನಿಗಿಂತಲು ಹೆಚ್ಚಾಗಿರುವುದಿಲ್ಲ."

ಅಪರಿಮಿತವಾದ ವಿಶ್ವವು ದೇವರಿದ್ದಾನೆ ಎಂದು ಗಟ್ಟಿಯಾಗಿ ಹೇಳುತ್ತದೆ. ದೇವರ ಅಸ್ತಿತ್ವ, ಬಲ, ಹಾಗೂ ಒಳ್ಳೆಯತನವು ಸತತವಾಗಿ ಆಕಾಶದ ಪ್ರಕಟನೆಯಿಂದ ಸ್ತುತಿಸಲ್ಪಡುತ್ತಲಿದೆ. ಅದರ ಸಾಕ್ಷವು ಕೇವಲ ಒಂದು ಸಂಕೇತವಾಗಿರುವದಿಲ್ಲ; ಅದು ಒಂದು ಘೋಷಣೆಯಾಗಿದೆ. ನೀವು ದೈವಿಕ ಘನತೆಯನ್ನು ನೋಡುವುದಾದರೆ, ನಕ್ಷತ್ರಗಳ ಆಕಾಶದ ಕಡೆಗೆ ದಿಟ್ಟಿಸಿ ನೋಡಿರಿ. ನೀವು ಅನಂತತ್ವವನ್ನು, ಜ್ಞಾನವನ್ನು ಮತ್ತು ದೈವಿಕ ನಿಷ್ಠೆಯನ್ನು ನೋಡುವುದಾದರೆ, ನಕ್ಷತ್ರಗಳ ಸಮತೋಲನೆಯನ್ನು ಯೋಚಿಸಿರಿ, ಹಾಗೂ ಗ್ರಹಗಳ ಚಲನೆಗಳ ಕ್ರಮವನ್ನು ಗುರುತಿಸಿರಿ. ಅವು ಮಹಿಮೆಯನ್ನು ಮಾತ್ರವೇ ಅಲ್ಲ, ಆದರೆ ದೇವರ ಮಹಿಮೆಯನ್ನೇ ಘೋಷಿಸುತ್ತವೆ. ಜ್ಞಾನ ವುಳ್ಳ, ಅರುಹು ಉಳ್ಳ, ನಿಯಂತ್ರಿಸುವ ಮತ್ತು ಉನ್ನತನಾಗಿರುವ ಸೃಷ್ಟಿ ಕರ್ತನಿಗಾಗಿ ಉತ್ತರಿಸಲಾಗದ ವಾದಗಳಿಗೆ ಅವು ನಮ್ಮನ್ನು ನಡಿಸುವವು. ಅವುಗಳ ಸಾಕ್ಷವು ಎಲ್ಲಾ ಭಾಷೆಗಳಲ್ಲಿ ಘೋಷಿಸಲ್ಪಟ್ಟಿರುವುದು ಹಾಗೂ ಅವು ಖಂಡನೆ ಮಾಡಲಾರದ ಇಲ್ಲವೇ ಮೌನವಾಗಿರಿಸಲ್ಪಡದ ಸಾಕ್ಷಿಗಳಾಗಿರುವವು.

ಯಾವುದಾದರೊಂದು ಅಸ್ತಿತ್ವದಲ್ಲಿರುತ್ತದೆ ಹಾಗೂ ಯಾವುದಾದರೊಂದು ಏನೂ ಇಲ್ಲದ್ದರಿಂದ ಬರಲಾರದು. ಆದುದರಿಂದ, ಯಾವುದಾದರೂ ಯಾವಾಗಲೂ ಇರುತ್ತದೆ. ಆ "ಯಾವುದಾದರನ್ನು" ದೇವರು ಎಂದು ಬೈಬಲು ಕರೆಯುತ್ತದೆ.

## ಸೃಷ್ಟಿಯ ಮೂಲದ ಪ್ರಶ್ನೆಗೆ – ಬುದ್ಧಿಗುಣಸಂಪನ್ನವುಳ್ಳವನಿಂದ ಸೃಷ್ಟಿಸಲ್ಪಟ್ಟಿತು ಎಂಬುದು ತಾರ್ಕಿಕ ಉತ್ತರವಾಗಿದೆ

ಮಾನವನ ವಿವೇಕವು, "ಈ ಅದ್ಭುತಕರವಾದ ವಿಶ್ವದ ಮೂಲವು ಯಾವುದು?" ಎಂದು ಪ್ರಶ್ನಿಸುತ್ತದೆ. ಕೇವಲ ಎರಡು ಸಾಧ್ಯವಾದ ಉತ್ತರಗಳಿವೆ: ಆಕಸ್ಮಿಕ ಸಂಭವ ಇಲ್ಲವೇ ಬುದ್ಧಿಸಂಪನ್ನ ಉಳ್ಳವನಿಂದಾದ ಸೃಷ್ಟಿ. ಅದು ಆಕಸ್ಮಿಕ ಸಂಭವ ಇಲ್ಲವೇ ಅವಘಡದ ಪರಿಣಾಮವೆಂದು ನಾವು ನಂಬಬಹುದೋ? ನಾವು ಮಾತಾಡುತ್ತಿರುವ ಅದ್ಭುತವಾದ ಮತ್ತು ಅಪರಿಮಿತವಾದ ವಿಶ್ವವು ಕುರುಡು ಆಕಸ್ಮಿಕ ಘಟನೆಯ ಪರಿಣಾಮದಿಂದ ಆಗಿದೆಯೆಂದು ನಂಬುವ ವಿಚಾರಹೀನತೆ ಯಾರಲ್ಲಿರುವುದು? ಯಾವುದಾದರೂ ಏನೂ ಇಲ್ಲದ್ದರಿಂದ ಬರಲಾರದು. ಪರಿಣಾಮವು ಕಾರಣವನ್ನು ಕೇಳುತ್ತದೆ. ಆಕಸ್ಮಿಕ ಘಟನೆಯು ಪ್ರಾಕೃತ ಜಗತ್ತನ್ನು ಉತ್ಪಾದಿಸುವದೆಂದು ನಾನು ನಂಬಲಾರೆನು. ಅದು ಜ್ಞಾನವುಳ್ಳ ಸೃಷ್ಟಿಕರ್ತನ ಸೃಷ್ಟಿಯ ಪರಿಣಾಮವೆಂದು ನಂಬುವದಕ್ಕಾಗಿ ಕೆಲವು ಕಾರಣಗಳನ್ನು ನಾವು ಯೋಚಿಸೋಣ.

ಮೊದಲನೆಯದು, ಅಗಣಿತ ಸಂಖ್ಯೆಯಲ್ಲಿ ವಿವಿಧ ಮೂಲ ವಸ್ತುಗಳನ್ನು ಜೀವದ ರೂಪಗಳನ್ನು ಉತ್ಪಾದಿಸಲು ಯೋಗ್ಯ ಪ್ರಮಾಣಗಳಲ್ಲಿ ವಿವಿಧ ಮೂಲಧಾತುಗಳನ್ನು ಕೂಡಿಸುವುದು ಒಂದುಗೂಡಿಸುವಾತನ, ಏರ್ಪಡಿಸುವಾತನ ಬಗ್ಗೆ ಬಲವಾಗಿ ಪ್ರತಿಪಾದಿಸುತ್ತದೆ. ವಿಶ್ವದಲ್ಲಿ ತಿಳಿದ 112 ಮೂಲಧಾತುಗಳಿವೆ, ನಾವು ನೋಡುವ ಪ್ರತಿ ಯೊಂದು ಈ ವಿವಿಧ ಮೂಲಧಾತುಗಳಿಂದ ಮಾಡಲ್ಪಟ್ಟಿದೆ. ಕೆಲವು ಮೂಲಧಾತುಗಳು ಕೊಡಲ್ಪಟ್ಟ ಪ್ರಮಾಣಗಳಲ್ಲಿ ಒಂದುಗೂಡಿಸ

ಲ್ಪಟ್ಟಾಗ ನಿರ್ದಿಷ್ಟವಾದವುಗಳನ್ನು ರೂಪಿಸುತ್ತವೆ. ಎರಡು ಪಾಲು ಜಲಜನಕ ಹಾಗೂ ಒಂದು ಪಾಲು ಪ್ರಾಣವಾಯುವು ನೀರನ್ನು ರೂಪಿಸುತ್ತದೆ. ಒಂದು ಭಾಗ ಸೋಡಿಯಮ್ ಮತ್ತು ಇನ್ನೊಂದು ಭಾಗ ಕ್ಲೋರಿನ್ ತಿನ್ನುವ ಉಪ್ಪಿಗೆ ಸಮವಾಗಿರುತ್ತದೆ. ಇದನ್ನು ಉದಾಹರಿಸಲು, ಇಂಗ್ಲೀಷ್ ಅಕ್ಷರ ಮಾಲೆಯಲ್ಲಿಯ ಇಪ್ಪತ್ತಾರು ಅಕ್ಷರಗಳನ್ನು ಯೋಚಿಸಿರಿ. ಸಾವಿರಾರು ಭಿನ್ನ ವಾದ ಪದಗಳನ್ನು ರಚಿಸಲು ವಿವಿಧ ಒಂದುಗೂಡಿಸುವಿಕೆಗಳ ಏರ್ಪಾಡು ಮಾಡಬಹುದು. ಪದ್ಯ, ಗದ್ಯ, ಯುದ್ಧ ಘೋಷಣೆ, ಸಂಧಾನ ಒಪ್ಪಂದ, ವರ್ತಮಾನ ಪತ್ರಿಕೆಯ ಲೇಖನ ಇಲ್ಲವೇ ಸಾಹಿತ್ಯದ ಯಾವುದೇ ರೀತಿಯ ರಚನೆ ಮಾಡಲು ಪದಗಳನ್ನು ಹೊಂದಿಸಬಹುದು. ಹೀಗಿದ್ದರೂ ಅಕ್ಷರಗಳನ್ನು, ಪದಗಳನ್ನು ರಚಿಸಲು ಕೆಲವೊಂದು ಜ್ಞಾನವಿಲ್ಲದೇ ಇದನ್ನು ಮಾಡಲಾಗದು. ಅಕ್ಷರ ಮಾಲೆಯಲ್ಲಿಯ ಅಕ್ಷರಗಳು ಒಂದು ಸ್ಥಳದಲ್ಲಿ ಬಿದ್ದು ಆಕಸ್ಮಿಕವಾಗಿ ಶೇಕ್ಸ್‌ಪಿಯರ್‌ನ ನಾಟಕ ರಚನೆ ಸಂಭವಿಸಿತು ಎಂದು ನಾವು ಯೋಚಿಸಬಹುದೋ? ಖಂಡಿತವಾಗಿ ನಾವು ಹಾಗೆ ಯೋಚಿಸಲಾರೆವು ಅದು ಎಂದಿಗೂ ಸಾಧ್ಯವಿಲ್ಲ. ಆದಾಗ್ಯೂ ಮೂಲಧಾತುಗಳ ವಿವಿಧ ಮಿಶ್ರಣಗಳು ಕುರುಡು ಆಕಸ್ಮಿಕತೆಯ ಇಲ್ಲವೇ ಅವಘಡದ ಪರಿಣಾಮವಾಗಿದೆಯೆಂದು ತಿಳಿದು ಕೊಳ್ಳುವುದು ಸಹ ಅಂತಹದೆ ಆಗಿದೆ. ಅದು ಹಾಗಿರುವ ಸಾಧ್ಯತೆಯಿಲ್ಲ!

ಎರಡನೆಯದು, ವಿಶ್ವದಲ್ಲಿ ನಮ್ಮ ಬಗ್ಗೆ ಜ್ಞಾನವುಳ್ಳ ಯೋಜನೆ ಹಾಗೂ ರೂಪಿಸುವಿಕೆಯ ಪುರಾವೆಗಳನ್ನು ನಾವು ನೋಡುತ್ತೇವೆ. ರೂಪಿಸುವಿಕೆಯು ಸೃಷ್ಟಿಯ ಚಿಕ್ಕ ವಸ್ತುಗಳಲ್ಲಿಯೂ ಸ್ಪಷ್ಟವಾಗಿದೆ. ಪ್ರತಿಯೊಂದು ಹಿಮಕಣವೂ ಪರಿಪೂರ್ಣವಾಗಿ ರೂಪಿಸಲ್ಪಟ್ಟಿದೆ. ಪ್ರತಿಯೊಂದು ಹುಲ್ಲು ಕಡ್ಡಿಯು ಚೆನ್ನಾಗಿ ನಿಯಂತ್ರಿಸಿದ ರಾಸಾಯನಿಕ ಪ್ರಯೋಗ ಶಾಲೆಯಂತಿದೆ. ನಾವು ಜೀವಿಸುವ ಮಾನವ ದೇಹವು ಮಾನವಾತೀತ ನಿರ್ಮಾಣ ಕ್ರಮವನ್ನು ಹೊಂದಿದೆಯೆಂದು ತೋರಿಸುತ್ತದೆ. ಜಾಗರೂಕತೆಯಿಂದ ಗಮನಿಸುವವನು ಕೀರ್ತನೆ ಗಾರನೊಂದಿಗೆ ಹೀಗೆ ಆಶ್ಚರ್ಯಕರವಾಗಿ ಹೇಳದೇ ದೇಹದ ರಚನೆಯ ಮೇಲೆ ಕೇಂದ್ರೀಕರಿಸಲಾರನು: “ನೀನು ನನ್ನನ್ನು ಅದ್ಭುತವಾಗಿಯೂ, ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನು ಕೊಂಡಾಡುತ್ತೇನೆ” (ಕೀರ್ತನೆ 139:14). ಇನ್ನೂರು ಎಲಬುಗಳು, ಐದನೂರು ಸ್ನಾಯುಗಳು ಮತ್ತು ಅವುಗಳನ್ನು ಒಂದಾಗಿ ಬಂಧಿಸುವ ಸಾವಿರಾರು ಅಸ್ತಿ ಬಂಧಕಗಳು ಸಾಮರಸ್ಯವಾದ ಯೋಜನೆಯ ಮತ್ತು ರೂಪಿಸುವಿಕೆಯ ಪರಿಪೂರ್ಣ ಉದಾಹರಣೆಯನ್ನು ಒದಗಿಸುತ್ತವೆ. ಸಾವಿರಾರು ನರಗಳು, ಸಾವಿರಾರು ಗ್ರಂಥಿಗಳು ದೇಹದ ಒಳ್ಳೆಯದಕ್ಕಾಗಿ ಎಲ್ಲವೂ ಕಾರ್ಯಮಾಡುವುದು ಮತ್ತು ಒಂದಾಗಿ ಕೆಲಸ ಮಾಡುವುದು - ಜ್ಞಾನವುಳ್ಳ ರಚನೆಯ ಚಿತ್ರವನ್ನು ಕೊಡುತ್ತದೆ. ಇದು ಆಕಸ್ಮಿಕ ಘಟನೆಯ ಪರಿಣಾಮವಾಗಿರುವದಿಲ್ಲ. ಮಾನವ ಕಣ್ಣಿನ ಜಟಿಲವಾದ ವಿಷಯಗಳು ಅನೇಕ ವೈಜ್ಞಾನಿಕ ಗ್ರಂಥಗಳನ್ನು ತುಂಬುವಷ್ಟಿರುವವು. ಜ್ಞಾನವುಳ್ಳ ಸೃಷ್ಟಿ ಕರ್ತನ ಅಸ್ತಿತ್ವದಿಂದ ಮಾತ್ರವೇ ಎಂದು ಹೇಳಲ್ಪಡುವ ರಚನೆಯನ್ನು ಕಣ್ಣು ಪ್ರಕಟಿಸುತ್ತದೆ, ಈ ಒಂದು ಅಂಗದ ಮೇಲೆಯೇ ಜನರು ಜೀವನಾದ್ಯಂತ ಅಧ್ಯಯನ ಮಾಡಬಹುದು ಹಾಗೂ ಅದರ ಮೇಲೆ ಅವರು ತಿಳಿಯದೇ ಇರುವಂಥದ್ದು ಬಹಳವಿದೆ ಎಂದು ಅವರು ಅರಿಕೆ ಮಾಡಬಹುದು.

ಇದೇ ಹೇಳಿಕೆಯು ಮಾನವ ದೇಹದ ಇತರ ಅಂಗಗಳ ಬಗ್ಗೆ ಹೇಳಲ್ಪಡಬಹುದು. ದೈಹಿಕ ಅಂಗಗಳ ನಿರ್ಮಾಣ ಮಾನವ ಜೀವಿಗಳಿಗೆ ಅಷ್ಟೇ ಪರಿಮಿತಿಯಾಗಿರುವದಿಲ್ಲ. ನಮ್ಮ ಸುತ್ತಲೂ ಇರುವ ಜೀವಿಗಳ ಸಮೂಹಗಳು ದೇವರ ಅಸ್ತಿತ್ವದ ಬಗ್ಗೆ ಉತ್ತರಿಸಲಾಗದ ವಾದವನ್ನು ಒದಗಿಸುವವು. ಆಕಾಶದಲ್ಲಿ ಹಾರಾಡುವ ಪಕ್ಷಿಗಳು ತಮ್ಮ ಜೀವಿಸುವ ಕ್ಷೇತ್ರಕ್ಕಾಗಿ ಅಗತ್ಯವಾದ ಸಾಧನಗಳೊಂದಿಗೆ ಹೊಂದಿಸಲ್ಪಟ್ಟಿರುವವು. ಸಮುದ್ರದಲ್ಲಿ ಈಜುವ ಮೀನುಗಳು ತಮ್ಮ ವಾತಾವರಣಕ್ಕೆ ಅಗತ್ಯವಾಗಿರುವ ದೇಹ ರಚನೆಗಳೊಂದಿಗೆ ಮಾಡಲ್ಪಟ್ಟಿರುವವು. ಪ್ರತಿಯೊಂದು ಜೀವರೂಪವೂ, ಜೀವವಿಲ್ಲದ

ವಸ್ತುಗಳೂ ರೂಪಿಸಿದಾತನ, ಜ್ಞಾನವುಳ್ಳ ರಚಕನ ಬಗ್ಗೆ ಸಾಕ್ಷಿಕೊಡುವವು.

ಮೂರನೆಯದು, ವಿಶ್ವದಲ್ಲಿಯ ಕ್ರಮ ನಿಯಮದ ಅಸ್ತಿತ್ವವು ಜ್ಞಾನವುಳ್ಳ ಸೃಷ್ಟಿಗಾಗಿ ವಾದಿಸುವುದು. ಗ್ರಹಗಳು ತಮ್ಮ ವೃತ್ತಗಳಲ್ಲಿ ಕ್ರಮಪ್ರಕಾರವಾಗಿ ಚಲಿಸುವವು ಮತ್ತು ಒಂದಕ್ಕೊಂದು ನಿಶ್ಚಿತವಾದ ರೀತಿಯಲ್ಲಿ ಹೊಂದಿಕೊಂಡಿರುವವು. ಪ್ರತಿ ಇಪ್ಪತ್ನಾಲ್ಕು ತಾಸಿಗೊಮ್ಮೆ ಪೃಥ್ವಿಯು ತನ್ನ ಅಕ್ಷದಲ್ಲಿ ತಿರುಗುವುದು. ಅದೇ ಸಮಯದಲ್ಲಿ ಪ್ರತಿ ತಾಸಿಗೆ 72,600 ಮೈಲುಗಳಂತೆ ಸೂರ್ಯನ ಸುತ್ತಾ ತಿರುಗುವುದು. ಅದು ಯಾವಾಗಲೂ ನಿಯಮಿಸಿದಂತೆ ಇರುವುದು! ಅದು ನಿಯಮದ ಪ್ರಕಾರವಾಗಿ ಚಲಿಸುವುದು. ಪ್ರತಿಯೊಂದರಲ್ಲಿಯೂ ಅಂಥ ನಿಯಮಗಳು ಕಂಡು ಬರುತ್ತವೇ. ಆಕಾಶದ ಗ್ರಹಣಗಳನ್ನು ನಿರ್ದಿಷ್ಟವಾಗಿ ಮುಂತಿಳಿಸಲಿಕ್ಕಾಗುವಂತೆ ಈ ನಿಯಮಗಳು ಭಿನ್ನವಾಗಿರುವದಿಲ್ಲ. ವಿಶ್ವದ ನಿಯಮಗಳು ಜಾರಿಯಲ್ಲಿರುತ್ತವೆ. ಪರಿಣಾಮದ ಕಷ್ಟಗಳನ್ನು ಅನುಭವಿಸದೇ ನಿಸರ್ಗದ ನಿಯಮಗಳನ್ನು ಮುರಿಯಲಾರನು ಎಂಬ ಕಹಿಯಾದ ಅನುಭವದಿಂದ ಮಾನವನು ಕಲಿತುಕೊಂಡಿದ್ದಾನೆ. ಒಂದನ್ನು ಮೀರಿದ್ದಕ್ಕೆ ಕರುಣೆಯಿಲ್ಲದೇ ಘಾಯ ಉಂಟಾಗುತ್ತದೆ. ಆಂಥ ನಿಯಮ, ಕ್ರಮವು ಆಕಸ್ಮಿಕ ಘಟನೆಯ ಪರಿಣಾಮವಾಗಿರುವುದಿಲ್ಲ. ನಿಯಮಗಳನ್ನು ಮಾಡುವಾತನೇ ಇರತಕ್ಕದ್ದು. ಈ ನಿಯಮಗಳನ್ನು ಜಾರಿಯಲ್ಲಿ ತರುವ ಶಕ್ತಿಯೊಂದಿಗೆ ಇರುವ ಬಲವು ಇರಲೇ ಬೇಕು ಮತ್ತು ಆ ಬಲವು ಬುದ್ಧಿಯುಳ್ಳದ್ದೂ ಜ್ಞಾನವುಳ್ಳದ್ದೂ ಆಗಿರಬೇಕು. ವಿಶ್ವದ ನಿಯಮಗಳು ಅವುಗಳನ್ನು ಮಾಡಿದ ಹಾಗೂ ಅವುಗಳನ್ನು ಮುಂದುವರಿಸುವ ಅತ್ಯುನ್ನತವಾದ ಬಲವು ಇರುವದೆಂಬುದಕ್ಕೆ ಸಾಕ್ಷಿಕೊಡುವುದು.

ನಾಲ್ಕನೆಯದು, ಜೀವನದ ಅಸ್ತಿತ್ವವು ಜೀವಿಸುವ ದೇವರ ಅಸ್ತಿತ್ವದ ಬಗ್ಗೆ ಮಾತಾಡುತ್ತದೆ. ಜೀವದ ಮೂಲವು ಯಾವುದು? ಜೀವವು ಜೀವದಿಂದ ಬರುವದರಿಂದ ಸಹಜವಾದ ಜೀವವು ಇರಲೇ ಬೇಕು. ಅದನ್ನು ನಾನು ದೇವರು ಎಂದು ಕರೆಯುತ್ತೇನೆ. ಆತನು ಮಾತ್ರವೇ ಜೀವದ (ಪ್ರಾಣದ), ಅದರ ಆರಂಭಕ್ಕೆ ಆಲೋಚನೆ ಮಾಡತಕ್ಕ ವಿವರಣೆಯೂ ಅದರ ಮೂಲವೂ ಆಗಿದ್ದಾನೆ. ಜೀವದ ರಹಸ್ಯದ ತಿಳುವಳಿಕೆಯನ್ನು ಹುಡುಕುವದರಲ್ಲಿ ನಾವು ಅಂತಿಮವಾಗಿ ಆತನ ಬಳಿಗೆ ಬರತಕ್ಕದ್ದು. ಆತನನ್ನು ದಾಟಿ ನಾವು ಹೋಗಲಾರೆವು. ಆಕಸ್ಮಿಕತೆಯಿಂದ ಜೀವವು ಸಂಭವಿಸುವುದಿಲ್ಲ. ಅದು ಸ್ವಯಂ ಸ್ಫೂರ್ತಿಯಿಂದ ಹುಟ್ಟಿಸಲ್ಪಟ್ಟಿರುವುದಿಲ್ಲ. ಪ್ರಥಮ ಕಾರಣವು ಇರಲೇಬೇಕು.

## ಮುಕ್ತಾಯ

ದೇವರ ಕಾರ್ಯಗಳನ್ನು ನಾವು ನಿರೀಕ್ಷಿಸುವಾಗ ನಾವು ದಾವೀದನೊಂದಿಗೆ, "ನೀನು ಮನುಷ್ಯನನ್ನು ನೆನಸಲು ಅವನು ಎಷ್ಟರವನು ... ?" (ಕೀರ್ತನೆ 8:4) ಎಂದು ನಾವು ಕೇಳುವಂತಾಗುವುದು. ಮಾನವನು ಕೇವಲ ಅಲ್ಪನಾಗಿದ್ದು ಕೇವಲ ಅಲ್ಪವಾದದ್ದರ ಮೇಲೆ ಜೀವಿಸುವನು. ಆದಾಗ್ಯೂ ಹೊಳೆಯುವ ಎಲ್ಲಾ ನಕ್ಷತ್ರಗಳಿಗಿಂತ ಹೆಚ್ಚಾಗಿ ಆತನು ಮಾನವರಿಗಾಗಿ ಕಾಳಜಿ ಯಾಕೇ? ಯಾಕೆಂದರೆ ಮನುಷ್ಯನು ಆತನ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟಿರುವನು. ಮನುಷ್ಯನು ನಿತ್ಯವಾಗಿರುವನು. ವಿಶ್ವವು ಬೆಂಕಿಯ ಮೇಲಿರುವಾಗ, ಜಗತ್ತುಗಳು ಒಡೆಯಲ್ಪಡುವದರಲ್ಲಿ ಮಾನವನು ಉಳಿದು ಕೊಳ್ಳುವನು.

ದೇವರಲ್ಲಿ ನಾನು ನಂಬುವದಕ್ಕಾಗಿ ನನಗೆ ಸಂತೋಷವಿದೆ. ದೇವರಲ್ಲಿ ನಂಬಿಕೆಯಿಡದವನ, ದೇವರನ್ನು ತಿಳಿಯದ ವ್ಯಕ್ತಿಯ ಬಗ್ಗೆ ನಾನು ಕನಿಕರ ಪಡುತ್ತೇನೆ. ಆತನನ್ನು ಕಂಡುಕೊಂಡವರು ಮತ್ತು ಆತನನ್ನು ತಿಳಿದವರು ಜೀವದ ಹೋರಾಟಗಳನ್ನು ಜಯಿಸುವಲ್ಲಿ ತಿಳಿದು ಅಥವಾ ಅನುಭವಿಸಿದ ಬಲದ ಅತೀ ದೊಡ್ಡ ಮೂಲವು ದೇವರೆಂದು ಸಾಕ್ಷಿಕೊಡಬಹುದು. ಆತನ ಕೈಕೆಲಸಗಳಾಗಿರುವ ಆಕಾಶಗಳೂ ಭೂಮಿಯೂ ನಾಶವಾಗಿ ಹೋಗುವವು

ಆದರೆ ಆತನು ಉಳಿದು, ಸದಾಕಾಲ ಇರುವನು "ನೀನಾದರೋ ಏಕ ರೀತಿಯಾಗಿದ್ದೀ: ನಿನ್ನ ವರುಷಗಳು ಮುಗಿದು ಹೋಗುವದಿಲ್ಲ" (ಕೀರ್ತನೆ 102:27). "ಬೆಟ್ಟಗಳು ಉಂಟಾಗುವದಕ್ಕಿಂತ, ಭೂಮಿಯೂ ಅದರ ದೇಶಗಳೂ ನಿರ್ಮಾಣವಾಗುವದಕ್ಕಿಂತ ಮುಂಚಿನಿಂದ ಯುಗಯುಗಾಂತರಗಳಲ್ಲಿಯೂ ನೀನೇ ದೇವರು" (ಕೀರ್ತನೆ 90:2). ಬದಲಾವಣೆಯು ಮತ್ತು ದಾಟಿ ಹೋಗುತ್ತಿರುವ ಸಮಯದಲ್ಲಿ, ಕ್ಷೀಣಿಸುವ ಹಾಗೂ ವಿನಾಶ ಜಗತ್ತಿನಲ್ಲಿ ಆತನ ಬದಲಾಗದ ಹಸ್ತವನ್ನು ಹಿಡಿಯಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.

© 2009 Truth for Today